## ಪದಬಂಧ



ಎಡದಿಂದ ಬಲಕ್ಕೆ:

1. ಆಪ್ತರಾದ ಜನರೆಲ್ಲ ಸೇರಿ ಕಷ್ಟಕಾಲಕ್ಕೆಂದು ಸಂಗ್ರಹಿಸಿಟ್ಟ ಹಣ 4
3. ಮಿಶ್ರಮಾಡುವ ಕೆಲಸಕ್ಕೆ ಸೇರಿ ಹಿಂದುಮುಂದಾದ ಕಷ್ಟಜೀವಿ 3
4. ಅಲ್ಲಿ ಕಣ್ಣಿಗೆ ಕಂಡ ದೃಶ್ಯ ಅತ್ಯಲ್ಪ ಕಾಲದ್ದು 3
6. ದೀರ್ಘ ಪ್ರಣಯದ ನಂತರ ನಡೆದದ್ದು ಈ ವಿವಾಹ 4
8. ವೈಭವವನ್ನು ಮೆರೆಸುವ ಹಾಗಿದೆ ನೋಡಿ, ಅದ್ಭುತ ಮನೆ 4
10. ಕರ್ತಾರನದೇ ಸೃಷ್ಟಿ, ಮುತ್ತು ಹವಳ ಮೂಲ ಕಡಲು 4
12. ಯಾವ ಕೆಲಸಕ್ಕೂ ಒಗ್ಗುವುದಿಲ್ಲ ಬಿಸಿಬಿಸಿಯ ಋತುಮಾನ 4
16. ಹುಷಾರಿರಲಿ ಸದಾ, ಅದೊಂದು ಮಹಾನಗರ 3
17. ಕ್ಷೀರ ತರುವ ಹಾದಿ ಸಂಪೂರ್ಣ ಕಾಪಾಡಲ್ಪಟ್ಟಿದೆ 3
18. ಸೇಡು ತೀರಿಸಲು ಹೋದವರ ಮೈಮರೆಸಿದ ಜಲಪಾತ 4

ಮೇಲಿಂದ ಕೆಳಕ್ಕೆ :

1. ಅನ್ಯ ದೇಶೀಯರು ಕೇಳಿದ್ದು ಬದುಕಲು ನೆಲೆ 3
2. ಅಷ್ಟೂ ಕ್ಷೇತ್ರದಲ್ಲೂ ಕಾಣುವುದು ಒಂದೇ ತಾರೆ 3
3. ಕೊಟ್ಟ ಹಣ ಹಿಂಪಡೆಯುವುದು ಸ್ವಲ್ಪವೂ ಸುಲಭವಲ್ಲ 3
5. ವೇತನಕ್ಕೆ ಹಣ ಒದಗಿಸುವುದು ಮಾಡಲೇಬೇಕಾದ ಕೆಲಸ 3
6. ಪರಾತ್ಪರನ ಆಶ್ರಯವೇ ಸಾಕೆಂದ ಪ್ರಸಿದ್ಧ ಋಷಿವರ್ಯ 4
7. ಶಾಸಕರ ಮನವೊಲಿಸುವ ಯತ್ನದಲ್ಲಿ ಗೆಲುವು ಕೈ ಸೇರಿತು 4
8. ವೆಚ್ಚಗಳನ್ನೆಲ್ಲ ಬೇರೆಯವರೇ ಭರಿಸುವ ಆಶ್ವಾಸನೆ ಸಿಕ್ಕಿದೆ 4
9. ಹಕ್ಕುಗಳನ್ನು ಕೇಳುವಂತೆಯೇ ಇರಲಿಲ್ಲ ; ಅಂಥ ಹಿಂದಿನ ಸಮಯ 4
11. ಶಂಕರನನ್ನು ಕರೆದ ಕೂಗು ಕಿವಿಗೆ ಕಿಂಚಿತ್ತೂ ಹಿತವಿಲ್ಲ 3
13. ಹುಲ್ಲು ಸಿಗುವ ತನಕ ಕುದುರೆಯ ಕೂಗು ಹೀಗೇ ... 3
14. ನಮ್ಮ ದೇಶದ ಕರಾವಳಿಯ ಕಡಲಿನ ಅಬ್ಬರ ಹೇಗೆ ? 3
15. ಬೇರೆಲ್ಲೂ ಸಿಗಲಾರದು ಬಿಡಿ ಇಂಥ ಪೊರಕೆ 3

---

### 16—09—2021 ಉತ್ತರಗಳು

ಎಡದಿಂದ ಬಲಕ್ಕೆ:

1. ಅಜೇಯ 3. ಶರಧಿ 4. ಮಜ್ಜನ 6. ಕವಳ 7. ಪ್ರಚಾರಕ 9. ಅರವಿಂದ 11. ನವನೀತ 13. ಸುರಲೋಕ 15. ಅಡಗು 17. ಜತನ 18. ಜನತೆ 19. ತಿಜೋರಿ

ಮೇಲಿಂದ ಕೆಳಕ್ಕೆ:

1. ಅಧಿಕ 2. ಯಮಳ 3. ಶರ್ಕರ 5. ನಕಾರ 7. ಪ್ರಸಾಧನ 8. ಕಲುಷಿತ 9. ಅಭ್ಯಸಿಸು 10. ದಣ್ಣಾಯಕ 12. ನೀರಜ 14. ರಮ್ಯತೆ 15. ಅನತಿ 16. ಗುಜರಿ

ಪ್ರಶ್ನಾಂಕಣ

# ಸಿಂಹ: 'ಮೃಗರಾಜ' ಹೌದೇ?

ಅದೊಂದು ಕಾಲ್ಪನಿಕ ಜನಜನಿತ ಭಾವನೆ ; ಮಕ್ಕಳ ಕಥೆಗಳಿಗಷ್ಟೇ ಒಪ್ಪವಾಗುವ ಮಿಥ್ಯಾಕಲ್ಪನೆ! ವಿಶೇಷವಾಗಿ ಗಂಡು ಸಿಂಹಗಳ ಗಾತ್ರ, ದೇಹ ಶಕ್ತಿ, ಕೊರಳಿನ ಸುತ್ತಲಿನ ದಟ್ಟ ಕೇಶ ರಾಶಿಯಿಂದ ಪ್ರಾಪ್ತವಾದ ವಿಶಿಷ್ಟ ರೂಪ, ಘರ್ಜನಾ ಸಾಮರ್ಥ್ಯ, ಉಗ್ರ ಗಂಭೀರ ಮುಖಭಾವ... ಇಂಥ ಲಕ್ಷಣಗಳೇ ಸಿಂಹಗಳಿಗೆ ಸಿಕ್ಕಿರುವ 'ಮೃಗರಾಜ', 'ಕಾಡಿನ ಅರಸ' ಇತ್ಯಾದಿ ಅಭಿಧಾನಗಳ ಮತ್ತು ಮಿಥ್ಯಾ ರೂಪಕಗಳ ಮೂಲ. ಸಿಂಹಗಳ ವಾಸ್ತವ ಗುಣಗಳ, ಬದುಕಿನ ರೀತಿನೀತಿಗಳ ಸಂಕ್ಷಿಪ್ತ ಪರಿಚಯ.

- ಸಿಂಹ ಅದೊಂದು ಬಗೆಯ 'ಬೆಕ್ಕು'. ಬೆಕ್ಕುಗಳ ಒಟ್ಟು ಮೂವತ್ತೇಳು ಪ್ರಭೇದಗಳಲ್ಲಿ ಎಂಟು ಪ್ರಭೇದಗಳು 'ದೊಡ್ಡ ಬೆಕ್ಕು'ಗಳು ಎಂದೇ ಪ್ರಸಿದ್ಧ: ಹುಲಿ, ಸಿಂಹ, ಚಿರತೆ (ಲೆಪರ್ಡ್), ಹಿಮ ಚಿರತೆ (ಸ್ನೋ ಲೆಪರ್ಡ್), ಚೀತಾ, ಪರ್ವತ್ ಸಿಂಹ (ಪ್ಯೂಮಾ) ಮತ್ತು ಕ್ಲೌಡೆಡ್ ಲೆಪರ್ಡ್. ಸ್ಪಷ್ಟವಾಗಿಯೇ, ಗಾತ್ರದಲ್ಲಿ ಸಿಂಹದ್ದು ಹುಲಿಯ ನಂತರದ ದ್ವಿತೀಯ ಸ್ಥಾನ; ಪ್ಯೂಮಾದಂತೆಯೇ ಸಿಂಹದ್ದು ಕೂಡ ಯಾವುದೇ ಚುಕ್ಕಿ, ಮಚ್ಚೆ ಅಥವಾ ಪಟ್ಟೆ ಇತ್ಯಾದಿ ಚಿತ್ತಾರ ರಹಿತ ಚರ್ಮ (ಚಿತ್ರಗಳಲ್ಲಿ ಗಮನಿಸಿ)
- ವಯಸ್ಕ ಗಂಡು ಸಿಂಹಗಳ ಕತ್ತಿನ ಸುತ್ತಲ ಕೂದಲ ರಾಶಿ (ಚಿತ್ರ 1 ಮತ್ತು 3) ಅವುಗಳ ಪರಮ ವಿಶಿಷ್ಟ ಲಕ್ಷಣ. ಬೆಕ್ಕುಗಳ ಸಕಲ ವಿಧಗಳಲ್ಲೂ 'ಘರ್ಜನಾ ಸಾಮರ್ಥ್ಯ' ಇರುವುದು ಸಿಂಹಕ್ಕೆ ಮಾತ್ರ.
- ಆಫ್ರಿಕಾ ಖಂಡದ ಕೆಲವು ರಾಷ್ಟ್ರಗಳ 'ಹುಲ್ಲು ಬಯಲು'ಗಳಲ್ಲಿ ಮತ್ತು ಏಷಿಯದ ನಮ್ಮ ರಾಷ್ಟ್ರದ ಗುಜರಾತ್‌ನ ಗಿರ್ ವನ್ಯಧಾಮದಲ್ಲಿ ಮಾತ್ರ ಸಿಂಹಗಳಿವೆ. ಬೆಕ್ಕುಗಳ ಸಕಲ ಪ್ರಭೇದಗಳಲ್ಲೂ 'ಸಂಘ ಜೀವನ' ನಡೆಸುವ ಪರಿಪಾಟ ಇರುವುದು ಸಿಂಹಗಳಲ್ಲಿ ಮಾತ್ರ. ಮೂರು ನಾಲ್ಕು ವಯಸ್ಕ ಹೆಣ್ಣುಗಳು ಮತ್ತು ಮರಿಗಳ ಗುಂಪಿಗೆ ಯಜಮಾನನಾಗಿ ಬಲಿಷ್ಠ ಗಂಡು ಸಂಸಾರ ನಡೆಸುತ್ತದೆ. ದುರ್ಬಲಗೊಂಡ ಗಂಡನ್ನು ಅನ್ಯ ಗಂಡೊಂದು ಹೋರಾಡಿ ಓಡಿಸಿ ಗುಂಪಿಗೆ ಹೊಸ ಯಜಮಾನನಾಗುತ್ತದೆ. ಹಾಗಾದೊಡನೆ ಹಳೆಯ ಗಂಡಿನಿಂದ ಜನಿಸಿದ್ದ ಎಲ್ಲ ಮರಿಗಳನ್ನೂ ಕೊಂದು ತಿಂದು ತನ್ನ ಸಂತಾನವನ್ನು ಬೆಳೆಸುತ್ತದೆ.




- ಗಂಡು ಸಿಂಹಗಳದು ತುಂಬ ಸೋಮಾರಿತನದ, ವಿಪರೀತ ಸ್ವಾರ್ಥದ ಜೀವನ ಕ್ರಮ. ಹೆಣ್ಣು ಸಿಂಹಗಳದೇ ಬೇಟೆಯಾಡುವ ಕೆಲಸ. ಹಾಗಾದರೂ ಊಟದಲ್ಲಿ ಮಾತ್ರ ಗಂಡಿಗೇ ಅಗ್ರಪಾಲು. ಅದು ಯಥೇಚ್ಛ ತಿಂದು ಉಳಿದಿದ್ದಷ್ಟೇ ಹೆಣ್ಣುಗಳು ಮತ್ತು ಮರಿಗಳಿಗೆ! ಇತರ ಪ್ರಾಣಿಗಳು ಹಿಡಿದ ಬೇಟೆಯನ್ನು ಕಸಿಯಲು, ಕದಿಯಲು ಮತ್ತು ಇತರರು ತಿಂದು ಬಿಟ್ಟುಹೋದ ಹಳಸಲನ್ನೇ ಸೇವಿಸಲು ಕೂಡ ಸಿಂಹಗಳು ಹಿಂಜರಿಯುವುದಿಲ್ಲ! ಸಿಂಹಗಳಿಗೆ (ವಿಶೇಷವಾಗಿ ಗಂಡು ಸಿಂಹಗಳಿಗೆ) 'ರಾಜ ಯೋಗ್ಯ ಗುಣ' ಒಂದೂ ಇಲ್ಲ ಎಂಬುದು ಸ್ಪಷ್ಟವಾಯಿತಲ್ಲ?

■ ಎನ್. ವಾಸುದೇವ್